ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೊಟ್ಟಿಗೆರೆ ವಾರ್ಡ್ ಸಂಖ್ಯೆ–194.

ವಾರ್ಡ್ ಕಛೇರಿಯಲ್ಲಿ ದಿನಾಂಕ: 01–06–2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

| ಹಾಜರಿದ್ದವರು | ಗೈರುಹಾಜರು |
|---|---|
| 1. ಅಧ್ಯಕ್ಷರು, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ, ಬೆಂಗಳೂರು.<br>2. ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಾರ್ಯದರ್ಶಿ, ವಾರ್ಡ್ ನಂ.194, ಗೊಟ್ಟಿಗೆರೆ.<br>3. ವೈದ್ಯಾಧಿಕಾರಿಗಳು, ಗೊಟ್ಟಿಗೆರೆ.<br>4. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ), ಗೊಟ್ಟಿಗೆರೆ.<br>5. ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)<br>6. ವಾರ್ಡ್ ಸಹಾಯಕ ಅಭಿಯಂತರರು ವಾರ್ಡ್ ನಂ.194, ಗೊಟ್ಟಿಗೆರೆ<br><br>ಸ್ಥಳೀಯ ಸಂಘ ಸದಸ್ಯರು:–<br>1. ಅಧ್ಯಕ್ಷರು, ಸೌತ್ ಅವೆನ್ಯೂ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>2. ಅಧ್ಯಕ್ಷರು, ಹಿಮಗಿರಿ ಮೆಡೋಸ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>3. ಅಧ್ಯಕ್ಷರು, ಪರಿವರ್ತನ ಸಂಘ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>4. ಅಧ್ಯಕ್ಷರು, ಕ್ಲಾಸಿಕ್ ಆರ್ಚರ್ಡ್ಸ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>5. ಅಧ್ಯಕ್ಷರು, ಹೆಚ್.ಎಮ್ ವರ್ಲ್ಡ್‌ಸಿಟಿ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>6. ಅಧ್ಯಕ್ಷರು, 7ನೇ ಬ್ಲಾಕ್ 9ನೇ ಹಂತ, ಜೆ.ಪಿ ನಗರ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ. | 1. ಸಂಚಾರಿ ಇನ್ಸ್‌ಪೆಕ್ಟರ್, ಗೊಟ್ಟಿಗೆರೆ<br>2. ತೋಟಗಾರಿಕೆ ಇಲಾಖೆ.<br>3. ಅಭಿಯಂತರರು (ಬೃಹತ್ ರಸ್ತೆಗಳು) |

ದಿನಾಂಕ:01–06–2021 ರಂದು ಮಧ್ಯಾಹ್ನ 03:00 ಘಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ರವರು ಸಭೆಯಲ್ಲಿ ಎಲ್ಲರನ್ನು ಸ್ವಾಗತಿಸುತ್ತಾ, ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಕೋವಿಡ್–19 ಸಂಬಂಧ ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಬಗ್ಗೆ.

(i) ವೈದ್ಯಾಧಿಕಾರಿಗಳು, ಪಿ.ಹೆಚ್.ಸಿ, ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿ Testing ಹಾಗೂ Home Isolation ಪ್ರಕರಣಗಳ ಮೇಲ್ವಿಚಾರಣೆಗಾಗಿ ಎಂಟು ತಂಡಗಳನ್ನು ನಿರ್ಮಿಸಿರುವುದಾಗಿ ಹಾಗೂ ದೈನಂದಿನ ಬರುವ ಎಲ್ಲಾ ಕೋವಿಡ್–19 ಪ್ರಕರಣಗಳ Primary contacts testing ಹಾಗೂ Home Isolation ರಲ್ಲಿರುವ ಸಾರ್ವಜನಿಕರ ಆರೋಗ್ಯದ ಬಗ್ಗೆ ನಿಗಾವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು.

(ii) ಮುಂದುವರೆದು, ಅರ್ಹರಿರುವ ಸಾರ್ವಜನಿಕರು Cowin App ಅಥವಾ Walk In ಮೂಲಕ ಲಸಿಕೆಯನ್ನು ಪಡೆಯಲು ಕೋರುತ್ತಾ ಗೊಟ್ಟಿಗೆರೆಯ ಸರ್ಕಾರಿ ಶಾಲೆಗಳಲ್ಲಿ 45 ಕ್ಕಿಂತ ಹೆಚ್ಚು ವಯಸ್ಸುಳ್ಳ ಸಾರ್ವಜನಿಕರು ಲಸಿಕೆ ಪಡೆಯಬಹುದಾಗಿದ್ದು, ದಿನಾಂಕ:07–05–2021 ರ ಹಾಗೂ ಸರ್ಕಾರದ ಆದೇಶದನ್ವಯ ಗುರುತಿಸಲಾಗಿರುವ ದೈನಂದಿನ ಹಮ್ಮಿಕೊಳ್ಳುವ ಲಸಿಕೆ ಶಿಬಿರಗಳಲ್ಲಿ 18 ವರ್ಷ ಮೇಲ್ಪಟ್ಟ ಅರ್ಹ ಸಾರ್ವಜನಿಕರು, ಲಸಿಕೆ ಪಡೆಯಬಹುದಾಗಿದೆ ಎಂದು ತಿಳಿಸಿದರು.



Scanned by CamScanner

2. **ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಸಂಬಂಧಿಸಿದ ವಿಷಯಗಳ ಬಗ್ಗೆ.**

(I) ಅಧ್ಯಕ್ಷರು, ರಾಯಲ್ ಕೌಂಟಿ, ಸೌತ್ ಅವೆನ್ಯೂ ಹಾಗೂ ಬಿ.ಡಿ.ಎ ಬಡಾವಣೆಗಳಲ್ಲಿ ದಿನನಿತ್ಯ ವಿದ್ಯುತ್ ಸರಬರಾಜಿನಲ್ಲಿ ಏರುಪೇರು ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸಲು Under Ground cable ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ಮುಕ್ತಾಯಗೊಂಡಿದ್ದು, ಶೀಘ್ರದಲ್ಲೇ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

(II) ಅಧ್ಯಕ್ಷರು, ಹಿಮಗಿರಿ ಮೆಡೋಸ್ ರವರು ತಮ್ಮ ಬಡಾವಣೆಯಲ್ಲಿ Transformer ಕಾಮಗಾರಿಯನ್ನು ಕೈಗೊಳ್ಳಲು ಕೋರಿದ್ದು, ಈ ಸಂಬಂಧ ಶ್ರೀ. ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರು ಮೇಲ್ಕಂಡ ವಿಷಯದ ಬಗ್ಗೆ ಅಗತ್ಯ ಕ್ರಮ ವಹಿಸಿ ಮುಂದಿನ ಸಭೆಗೆ ವರದಿ ನೀಡುವುದು.

3. **ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಂದ ಅನುಷ್ಠಾನಗೊಳ್ಳುತ್ತಿರುವ ಕುಡಿಯುವ ನೀರು ಹಾಗೂ ಒಳಚರಂಡಿ ಕಾಮಗಾರಿಗಳ ಪ್ರಗತಿ ಮತ್ತು ಸಂಬಂಧಿಸಿದ ವಿಷಯಗಳ ಬಗ್ಗೆ.**

(I) ಸೌತ್ ಅವೆನ್ಯೂ ಬಡಾವಣೆಯಲ್ಲಿ 7 ರಿಂದ 9ನೇ ಅಡ್ಡರಸ್ತೆಯ ಮಧ್ಯೆ ಒಳಚರಂಡಿ ನೀರು ಸರಾಗವಾಗಿ ಹರಿಯುವಂತೆ ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ಸಹಾಯಕ ಅಭಿಯಂತರರು ರವರು ಅಗತ್ಯ ಕ್ರಮ ಕೈಗೊಳ್ಳುವುದು.

(II) ಬಿ.ಡಿ.ಎ ಬಡಾವಣೆಯಲ್ಲಿ ನೀರು ಸರಬರಾಜು ಸರಿಪಡಿಸಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ. ರಾಯಲ್ ಕೌಂಟಿ ಬಡಾವಣೆಗೆ ಸಂಬಂಧಪಟ್ಟಂತೆ ಸಹಾಯಕ ಅಭಿಯಂತರರು ಸ್ವೀಕರಿಸಿರುವ ಅರ್ಜಿಗಳ ಅನುಮೋದನೆಯು ಜಾರಿಯಲ್ಲಿದ್ದು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಂಡಿರುವುದಾಗಿ ಸಭೆಗೆ ತಿಳಿಸಿದರು.

(III) ಅಧ್ಯಕ್ಷರು, ಹಿಮಗಿರಿ ಮೆಡೋಸ್ ಹಾಗೂ ಸೌತ್ ಅವೆನ್ಯೂ ತಮ್ಮ ಬಡಾವಣೆಯಲ್ಲಿ ವಾರಕ್ಕೆ ಎರಡು ಬಾರಿ ನೀರು ಸರಬಾರಜು ಮಾಡಲು ಕೋರಿರುತ್ತಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮಾತನಾಡುತ್ತಾ GSLR ಕಾಮಗಾರಿಯು ಅಂದಾಜು ಮೂರು ತಿಂಗಳುಗಳಲ್ಲಿ ಪೂರ್ಣಗೊಳ್ಳಲಿದ್ದು, ತದನಂತರ ಹೆಚ್ಚಿನ ಪ್ರಮಾಣದಲ್ಲಿ ನೀರು ಸರಬರಾಜು ಮಾಡಲು ಕ್ರಮವಹಿಸುವುದಾಗಿ ತಿಳಿಸಿದರು.

4. **ರಸ್ತೆ, ಪಾದಚಾರಿ ಹಾಗೂ ಮಳೆ ನೀರು ಚರಂಡಿ ಕಾಮಗಾರಿ ಬಗ್ಗೆ.**

(I) ರಾಯಲ್ ಕೌಂಟಿ ಬಡಾವಣೆಯ 80 ಫೀಟ್ ರಸ್ತೆ ಹಾಗೂ 7ನೇ ಬ್ಲಾಕ್, 9ನೇ ಹಂತ, ಜೆ.ಪಿ ನಗರ, ಶಂಕರ್‌ನಾಗ್ ರಸ್ತೆಗಳಲ್ಲಿ ಉಬ್ಬು ನಿರ್ಮಾಣದ ಸಂಬಂಧ ವಾರ್ಡ್ ಅಭಿಯಂತರರು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ಅಭಿಯಂತರರೊಂದಿಗೆ ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.

(II) ರಾಯಲ್ ಕೌಂಟಿ ಬಡಾವಣೆಯಲ್ಲಿರುವ 80 ಫೀಟ್ ರಸ್ತೆಯ ಪ್ರಾರಂಭದ ಹಾಗೂ ಕೊನೆಯ ಭಾಗಗಳಲ್ಲಿ ರಸ್ತೆಯನ್ನು ಅಗಲೀಕರಣ ಮಾಡಲು ಈ ಹಿಂದೆ ಪಾಲಿಕೆಯು ಸಮೀಕ್ಷೆಗೊಂಡಿರುವುದಾಗಿ ತಿಳಿಸುತ್ತಾ, ತ್ವರಿತವಾಗಿ ಕಾಮಗಾರಿಯನ್ನು ಕೈಗೊಳ್ಳಲು ಕೋರಿರುತ್ತಾರೆ. ಈ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೃಹತ್ ರಸ್ತೆಗಳು) ರವರು ಪ್ರಗತಿ ವರದಿ ಕೋರಿದ್ದು, ವಾರ್ಡ್ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೃಹತ್ ರಸ್ತೆಗಳು) ರವರೊಂದಿಗೆ ಸಮನ್ವ ಸಾಧಿಸಿ ಕ್ರಮವಹಿಸಲು ಸೂಚಿಸಲಾಯಿತು.

5. **ಘನತ್ಯಾಜ್ಯ ನಿರ್ವಹಣೆಯ ಬಗ್ಗೆ.**

(I) ಕೋವಿಡ್ ಸೋಂಕಿತರ ನಿವಾಸಗಳಿಂದ ಶೇಖರಿಸುವ ಹಸಿ ಹಾಗೂ ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ನಿರ್ವಹಿಸಲು ಕೋರಿರುತ್ತಾರೆ. ಹಿರಿಯ ಆರೋಗ್ಯ ಪರಿವೀಕ್ಷಕರು ಪ್ರತಿ ದಿನ ಕೋವಿಡ್-19 ಸೋಂಕಿತರ ವಿಳಾಸದ ವಿವರಗಳನ್ನು ಪಡೆದು ಪ್ರತ್ಯೇಕವಾಗಿ ನಿರ್ವಹಿಸುತ್ತಿರುವ ಬಗ್ಗೆ ಹಾಗೂ Bio Medical Waste ಅನ್ನು ಸಂಬಂಧಪಟ್ಟ ನಿರ್ವಹಣಗಾರರಿಗೆ ನೀಡುತ್ತಿರುವುದಾಗಿ ಸಭೆಗೆ ತಿಳಿಸಿದರು.



Scanned by CamScanner

**(II)** ಪೌರ ಕಾರ್ಮಿಕರಿಗೆ ಹಾಗೂ **Auto Tipper / Compactor** ಚಾಲಕರಿಗೆ ಕೋವಿಡ್-19 ರ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಿಯತಕಾಲಿಕವಾಗಿ ಹಮ್ಮಿಕೊಳ್ಳಲು ಹಾಗೂ ಒದಗಿಸಿರುವ **Hand Gloves, Mask, Boots** ಇತ್ಯಾದಿಗಳನ್ನು ಕಡ್ಡಾಯವಾಗಿ ಧರಿಸುವುದನ್ನು ಖಾತರಿಸಿಕೊಳ್ಳಲು ಹಿರಿಯ ಆರೋಗ್ಯ ಪರಿವೀಕ್ಷರಿಗೆ ತಿಳಿಸಲಾಯಿತು.

ಈ ಮೇಲೆ ತಿಳಿಸಿರುವ ಎಲ್ಲಾ ವಿಷಯ / ಸಮಸ್ಯೆಗಳ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ವಹಿಸಲು ಹಾಗೂ ಮುಂದಿನ ಸಭೆಗೆ ಅನುಪಾಲನಾ ವರದಿಯೊಂದಿಗೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಾಗಲು ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194, ಗೊಟ್ಟಿಗೆರೆ.

**ಪ್ರತಿಯನ್ನು:-**

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, BWSSB, ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
8. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
10. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
11. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ.
12. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
14. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
16. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
18. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
19. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
20. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
21. ಪೋಲೀಸ್ ಇನ್ಸ್‌ಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.
22. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.
23. ಸ್ಥಳೀಯ ನಾಗರೀಕ ಕಲ್ಯಾಣ ಸಂಸ್ಥೆಗಳು.



Scanned by CamScanner